**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**

**ದಿಃ-07-08-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲು ಃ ಪ್ರತಿವಾದಿ ಪರ ಶ್ರೀ. ಎಸ್.ಆರ್.ಆರ್ ವಕೀಲರಿಂದ ಃ**

ನಿ.ಪಿ.10 ರಲ್ಲಿ ರಮಾದೇವಿಯವರಿಗೆ ನೋಟೀಸನ್ನು ಆರ್.ಪಿ.ಎ.ಡಿ ಮುಖಾಂತರ ನೀಡಿದ್ದು ಆ ನೋಟೀಸನ್ನು ಅವರು ಸ್ವೀಕರಿಸಿದ್ದಾರೆಯೇ ಎಂದರೆ ನನಗೆ ಗೊತ್ತಿಲ್ಲ. ದಾಖಲಾತಿಯನ್ನು ಕಾಗದದಲ್ಲಿ ಅಂಟಿಸಿ ಅದರಲ್ಲಿ ವಿವರಗಳನ್ನು ಬರೆದಿದ್ದು ಅದನ್ನು ಸ್ವೀಕರಿಸಿದ್ದಾರೆ ಎಂದು ಕಂಡು ಬಂದಿದೆ ಅದನ್ನು ಯಾರು ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದನ್ನು ಸ್ವೀಕರಿಸಿದೆ ಎಂದು ಯಾವ ಕಾರಣಕ್ಕೆ ಬರೆದಿದೆ ಎಂದು ನನಗೆ ಗೊತ್ತಿಲ್ಲ. ಈ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಾನು ನ್ಯಾಯಾಲಯಕ್ಕೆ ಅದನ್ನು ಸಲ್ಲಿಸುವಾಗ ಅದರಲ್ಲಿ ಹಾಗೆ ಸ್ವೀಕರಿಸಿದೆ ಮತ್ತು ವಿವರಗಳನ್ನು ಬರೆದಿಲ್ಲ ಎಂದು ನುಡಿಯುತ್ತಾರೆ. ನಾವು ನ್ಯಾಯಲಯಕ್ಕೆ ಅಂಚೆ ರಶೀದಿಯನ್ನು ಕಾಗದದಲ್ಲಿ ಅಂಟಿಸಿ ಕೊಟ್ಟಿರುತೇವೆ ಆದರೆ ಆ ಹಾಳೆಯಲ್ಲಿ ಏನೂ ಬರೆದಿರುವುದಿಲ್ಲ ಎಂದು ನುಡಿಯುತ್ತಾರೆ. ಹಾಳೆಯಲ್ಲಿ ನನ್ನ ಹಳೆಯ ವಕೀಲರು ಸಹ ಬರೆದಿರುವುದಿಲ್ಲ ಎಂದು ನುಡಿಯುತ್ತಾರೆ. ಅದನ್ನು ಯಾವ ಉದ್ದೇಶಕ್ಕೆ ಕಳಿಸಲಾಗಿದೆ ಎಂದು ನನಗೆ ಗೊತ್ತು. ನಿ.ಪಿ.10 ಕ್ಕೆ ಸಂಬಂಧಿಸಿ ರಮಾದೇವಿಯವರು ನೋಟೀಸನ್ನು ಸ್ವೀಕರಿಸಿದ್ದಾರೋ ಇಲ್ಲವೋ ಎಂದು

ತೋರಿಸಲು ನಾನು ಅಂಚೆ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನಗೆ ಆ ಅಂಚೆ ಹಿಂಬರಹ ಬಂದಿರುವುದಿಲ್ಲ. ನಾನು ಅಂಚೆ ಕಚೇರಿಗೆ ಹೋಗಿ ಅದರ ಹಿಂಬರಹ ಬಂದಿಲ್ಲ ಅದು ಏನಾಗಿದೆ ಎಂದು ಕೇಳಿ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಆ ಬಗ್ಗೆ ನನಗೆ ಅಷ್ಟಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.10 ರಂತೆ ನಾನು ಕಳಿಸಿದ ನೋಟೀಸು ಅವರಿಗೆ ತಲುಪಿದೆಯೇ ಇಲ್ಲವೇ ಎಂದು ನನಗೆ ಗೊತ್ತಿಲ್ಲ. ಈ ನೋಟೀಸು ತಲುಪಿದೆಯೋ ಇಲ್ಲವೋ ಎಂದು ತಿಳಿಯದೆ ದಿನಾಂಕ 19.02.2015 ರಂದು ಪೊಲೀಸ್ ಠಾಣೆಗೆ ಹೋಗಿ ರಮಾದೇವಿಯವರ ವಿಳಾಸ ಸಿಗುತ್ತಿಲ್ಲವೆಂದು ಮತ್ತು ಅವರು ಎಲ್ಲಿದ್ದಾರೇ ಎಂದು ಗೊತ್ತಿಲ್ಲವೆಂದು ನಿ.ಪಿ.13 ರಂತೆ ದೂರು ನೀಡಿದ್ದೇನೆ ಎಂದರೆ ಸರಿ. ನನ್ನ ವಾದ ಪತ್ರದಲ್ಲಿ ತೋರಿಸಿದ ಪ್ರತಿವಾದಿಯ ವಿಳಾಸವು ಮತ್ತು ನಿ.ಪಿ.13 ರ ವಿಳಾಸವು ಒಂದೇ ಎಂದರೆ ಸರಿ. ವಾದ ಪತ್ರದಲ್ಲಿ ತೋರಿಸಿರುವ ವಿಳಾಸ ಮತ್ತು ಅಗ್ರಿಮೆಂಟ್ ನಲ್ಲಿ ತೋರಿಸಿರುವ ವಿಳಾಸಕ್ಕೂ ಸಹ ಸಮನ್ಸ್ ಹೋಗಿದ್ದು ಅದೆರಡೂ ಸಹ ಅವರಿಗೆ ತಲುಪಿರುತ್ತದೆ. ನಿ.ಪಿ.13 ನ್ನು ನೀಡಿದ ನಂತರ ಪೊಲೀಸರು ಪ್ರತಿವಾದಿಯವರು ಆ ವಿಳಾಸದಲ್ಲಿ ಇದ್ದರೋ ಇಲ್ಲವೋ ಎಂದು ಸ್ಥಳಕ್ಕೆ ಹೋಗಿ ಪರಿಶೀಲಿಸಿದಾದರೆ. ನಿ.ಪಿ16 ನ್ನು ಒಂದು ಹಾಳೆಯಲ್ಲಿ ಅಂಟಿಸಿದ್ದು ಆ ಹಾಳೆಯಲ್ಲಿ ಒಂದು ಬರವಣಿಗೆ ಕಂಡು ಬಂದಿದ್ದು ಆ ಬರವಣಿಗೆ ನಾನೇ ಮಾಡಿರುತ್ತೇನೆ. ನಿ.ಪಿ.10 ಮತ್ತು 16 ರಲ್ಲಿ ಕಂಡು ಬರುವ ಬರವಣಿಗೆಗಳು ಒಂದೇ ಎಂದರೆ ಸರಿಯಲ್ಲ. ನಿ.ಪಿ.8 ಅಂಚೆ ರಶೀದಿಯನ್ನು ಒಂದು ಹಾಳೆಯಲ್ಲಿ ಅಂಟಿಸಿದ್ದು ಅದರಲ್ಲಿಯೂ ಸಹ ಬರವಣಿಗೆಗಳು ಕಂಡು ಬಂದಿದ್ದು ಅದರಲ್ಲಿ ಅಡ್ರೆಸೀ ಲೆಫ್ಟ್ ಎಂದು ಬರೆದಿದ್ದು ಅದನ್ನು ನಾನೇ ಬರೆದಿರುತ್ತೇನೆ. ಅದನ್ನು ನಾನು ನಿ.ಪಿ.7 ರಲ್ಲಿ ಕವರಿನಲ್ಲಿ ಬರೆದದ್ದನ್ನು ನೋಡಿ ಹಾಳೆಯಲ್ಲಿ ಬರೆದಿರುತ್ತೇನೆ. ಈ ರೀತಿಯಾಗಿ ನಾನು ವಕೀಲರಿಗೆ ಮಾಹಿತಿ ನೀಡಲು ಬರೆದಿರುತ್ತೇನೆ. ನನಗೆ ವಕೀಲರು ಮಾಹಿತಿ ಬರೆದುಕೊಡುವಂತೆ ಕೇಳಿರುವುದ್ಲಿ. ನಿ.ಪಿ.8 ಮತ್ತು 10 ಒಂದೇ ಬರವಣಿಗೆ ಎಂದರೆ ಸರಿಯಲ್ಲ. ಕರಾರು ಪತ್ರ ಆಗುವ ಮೊದಲೇ ವಾದ ಪತ್ರದ ಸ್ವತ್ತಿಗೆ ಸಂಬಂಧಿಸಿ ಅದಕ್ಕೆ

ಬ್ಯಾಂಕಿನಲ್ಲಿ ಲೋನ್ ಇತ್ತು ಎಂದರೆ ಸರಿ. ಆ ಬಗ್ಗೆ ನನಗೆ ಕರಾರು ಪತ್ರ ಮಾಡುವಾಗ ತಿಳಿದಿತ್ತು. ಕರಾರು ಪತ್ರದ ಷರತ್ತು ಮತ್ತು ನಿಭಂದನೆಗಳ ಪ್ರಕಾರ ನೊಂದಣಿಯಾಗುವ ಮೊದಲೇ ನಾನು  ನೀಡಿದ ಕರಾರಿನ ಕ್ರಯ ಪತ್ರದ ಪ್ರತಿಫಲದ ಹಣದಲ್ಲಿ ತೀರಿಸಬೇಕೆಂದು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಗೆ ನಿ.ಪಿ.1 ರ ಖಂಡಿಕೆ 2 ಪುಟ ಸಂಖ್ಯೆ 3 ರಲ್ಲಿ ಈ ಬಗ್ಗೆ ನಮೂದಿಸಿದೆ ಎಂದರೆ ಸಾಕ್ಷಿ ಅದನ್ನು ಪರಿಶೀಲಿಸಿ ಮೇಲಿನಂತೆ ನಮೂದಿಸಿದೆ ಎಂದು ನುಡಿಯುತ್ತಾರೆ. ಸಾಲ ಪಡೆಯುವಾಗ ಪ್ರತಿವಾದಿಯವರು ಬ್ಯಾಂಕಿಗೆ ನೀಡಿದ ಎಲ್ಲಾ ದಾಖಲಾತಿಗಳನ್ನು ಈ ಪ್ರಕರಣದಲ್ಲಿ ತರಿಸಿ ಇಡಲಾಗಿದೆ ಎಂದರೆ ಸರಿಯಲ್ಲ.

ವಕೀಲರು ನನಗೆ ದಾಖಲೆಗಳನ್ನು ತರಬೇಕೆಂದು ನೀಡಿದ ಪಟ್ಟಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನನಗೆ ದಾಖಲೆಯನ್ನು ತರಬೇಕೆಂದು ಪಟ್ಟಿಯನ್ನು ನೀಡಿದ ವಕೀಲರನ್ನು ಕರೆಸಿ ಸಾಕ್ಷ್ಯ ವಿಚಾರಣೆಯನ್ನು ಮಾಡಲಾಗುವುದಿಲ್ಲ. ನನಗೆ ಯಾವ ಪಟ್ಟಿಯನ್ನು ಯಾವ ವಕೀಲರು ನೀಡಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಗಳು ವಾದ ಪತ್ರದ ಸ್ವತ್ತಿಗೆ ಇದ್ದಂತಹ ಸಾಲವನ್ನು ಸಂಪೂರ್ಣವಾಗಿ ತೀರಿಸಿದ್ದಾರೆ ಎಂದರೆ ಸರಿ. ಅಲ್ಲದೇ ಬ್ಯಾಂಕಿನವರು ಲೋನ್ ಕ್ಲಿಯರೆಂಸ್ ಸರ್ಟಿಫಿಕೇಟ್ ಸಹ ನೀಡಿದ್ದಾರೆ ಎಂದರೆ ಸರಿ. ಬ್ಯಾಂಕಿನವರು ನ್ಯಾಯಾಲಯಕ್ಕೆ ತಂದು ಹಾಕಿದ ದಾಖಲೆಗಳನ್ನು ನಮಗೆ ನೀಡಿದ್ದಾರೆ ಎಂದರೆ ಸರಿ. ಬ್ಯಾಂಕಿನಿಂದ ದಾಖಲೆಗಳು ಬೇಕು ಎಂದು ನಾನೇ ಅರ್ಜಿ ಹಾಕಿ ತರಿಸಿದ್ದೇನೆ ಎಂದರೆ ಸರಿ. ನಾನು ಅರ್ಜಿಯನ್ನು ಹಾಕಿರುವಂತದ್ದು ಬ್ಯಾಂಕಿನಲ್ಲಿರುವ ಎಲ್ಲಾ ದಾಖಲೆಗಳು ಈ ನ್ಯಾಯಾಲಯದ ಮುಂದೆ ಈ ಪ್ರಕರಣದಲ್ಲಿ ಬರಲಿ ಎಂಬ ಉದ್ದೇಶದಿಂದ ಎಂದರೆ ಸರಿ. 2 ತಿದ್ದು ಪಡಿ ಪತ್ರಗಳನ್ನು ನ್ಯಾಯಾಲಯದ ಮುಂದೆ ಪ್ರತಿವಾದಿಯವರು ನೀಡಿದ್ದಾರೆ ಎಂದರೆ ಸರಿ. ಬ್ಯಾಂಕಿನವರು ನೀಡಿದಂತಹ ದಾಖಲಾತಿಗಳು ಮತ್ತು ಪ್ರತಿವಾದಿಯವರು ನೀಡಿದಂತಹ ದಾಖಲಾತಿಗಳ ಮೇಲೆ ನೊಂದಣಿ ಮಾಡಲು ಯಾವುದೇ ತೊಂದರೆ ಇಲ್ಲ ಎಂದರೆ ಸಾಕ್ಷಿಯು ತೊಂದರೆ ಇದೆ ಇನ್ನೂ ಕೆಲವು ದಾಖಲಾತಿಗಳು ಇಲ್ಲ ಎಂದು ನುಡಿಯುತ್ತಾರೆ.

ನನ್ನ ಮುಖ್ಯ ವಿಚಾರಣೆಯ ಖಂಡಿಕೆ 10 ರಲ್ಲಿ ನನಗೆ ಕುರಿತಾದ ದಾಖಲೆಗಳನ್ನು ನೀಡದೇ ಇದ್ದುದ್ದರಿಂದ ಕ್ರಯ ಪತ್ರ ಮಾಡಲು ನನಗೆ ಆಗುವುದಿಲ್ಲ ಆದ್ದರಿಂದ ನಾನು ನೀಡಿದ ಮುಂಗಡ ಹಣದ ದುಪ್ಪಟ್ಟು ಹಣವನ್ನು ನನಗೆ ವಾರ್ಷಿಕ ಶೇ.18 ರಂತೆ ವಾಪಾಸು ನೀಡಬೇಕೆಂದು ಹಾಕಿದ್ದೇನೆ ಎಂದರೆ ಸರಿ. ಖಂಡಿಕೆ 10 ರ ಪ್ರಕಾರ ನಾನು ಕೇವಲ ಮುಂಗಡ ಹಣವನ್ನು ವಾಪಾಸು ನೀಡುವಂತೆ ಕೋರಿರುತ್ತೇನೆ. ನಿ.ಪಿ.1 ರಲ್ಲಿ 1 ತಿಂಗಳ ಒಳಗೆ ನಾನು ಕ್ರಯ ಪತ್ರ ನೊಂದಣಿ ಮಾಡದಿದ್ದರೆ ಆ 5 ಲಕ್ಷ ಹಣವನ್ನು ಮುಟ್ಟುಗೋಲು ಹಾಕಬಹುದು ಎಂದು ನಮೂದು ಇದೆ ಎಂದರೆ ಸರಿ. ನಿಮ್ಮ ನಿಬಂಧನೆಯಂತೆ ದಾಖಲಾತಿಗಳನ್ನು ಪಡೆದಿದ್ದರೂ ಸಹ ಒಂದು ತಿಂಗಳ ಒಳಗೆ ನಾನು ಬಾಕಿ ಹಣವನ್ನು ನೀಡಿ ಕ್ರಯ ಪತ್ರ ನೊಂದಣಿ ಮಾಡಿಸದೇ ಇದ್ದುದ್ದರಿಂದ ಆ ಹಣ ಮುಟ್ಟುಗೋಲಾಗಿದೆ ಮತ್ತು ಪ್ರತಿವಾದಿಗಳು ಯಾವುದೇ ಹಣ ನೀಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ. ನಾನು ನೀಡಿದ ನೋಟೀಸು ನಿ.ಪಿ.8 ರಲ್ಲಿಯೂ ಸಹ ಹಣವನ್ನು ಕೇಳಿದ್ದೇನೆ ಎಂದರೆ ಸಾಕ್ಷಿಯು ದಾಖಲೆಯನ್ನೂ ಸಹ ಕೇಳಿದ್ದೇನೆ ಎಂದು ನುಡಿಯುತ್ತಾರೆ.

ಕರಾರು ಪತ್ರ ಆದಾಗಿನಿಂದ ಈ ವರೆಗೂ ನನ್ನಲ್ಲಿ 1 ಕೋಟಿ 40 ಲಕ್ಷ ಖಾತೆಯಲ್ಲಿ ಇದೆ ಎಂದು ತೋರಿಸಲು ದಾಖಲೆಯನ್ನು ಸಲ್ಲಿಸಿಲ್ಲ. ಸಾಕ್ಷಿ ಮುಂದುವರೆದು ಕರಾರು ಪತ್ರದಲ್ಲೇ ಸಾಲ ಪಡೆಯವುದು ಎಂದು ನಮೂದಿಸಿದೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು ಸಾಲು ಇಲ್ಲದೇ ನನಗೆ ಈ ಸ್ವತ್ತನ್ನು ಖರೀದಿಸಲು ಶಕ್ತನಿಲ್ಲ ಎಂದು ನುಡಿಯುತ್ತಾರೆ. ಕರಾರು ಪತ್ರ ಆದ ನಂತರ ಉಳಿಕೆ ಪ್ರತಿ ಫಲದ ಹಣವನ್ನು ಸ್ವಲ್ಪವಾದರೂ ನೀಡಲು ಹಣ ಇರಲಿಲ್ಲ ಎಂದರೆ ಸಾಕ್ಷಿ ಇತ್ತು ಎಂದು ನುಡಿಯುತ್ತಾರೆ. ಅದು ಎಷ್ಟು ಇತ್ತು ಎಂದು ನನಗೆ ಈಗ ನೆನಪಿಲ್ಲ. ಹಣ ಇತ್ತು ಎಂದು ತೋರಿಸಲು ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಕರಾರು ಪತ್ರ ಆದ ದಿನಾಂಕದಿಂದ ಅದರ ನಿಬಂಧನೆಯಂತೆ ಒಂದು ತಿಂಗಳ ಒಳಗಡೆ ನನ್ನಲ್ಲಿ ಉಳಿದ ಕ್ರಯ ಪತ್ರಕ್ಕೆ ನೀಡುವ ಪ್ರತಿ ಫಲದ ಹಣ ನನ್ನಲ್ಲಿ ಇತ್ತು ಎಂದು ತೋರಿಸಲು ನನ್ನಲ್ಲಿ ದಾಖಲಾತಿಗಳು ಇವೆ. ಅವನ್ನು

ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಿ.ಪಿ.1 ರಂತೆ ಕ್ರಯ ಪತ್ರ ನೊಂದಣಿಯ ಖರ್ಚನ್ನು ಭರಿಸಬೇಕು ಎಂದಿದೆ ಎಂದರೆ ಸರಿ. ಅದು ಸುಮಾರು 6 ಲಕ್ಷ ಎಂದು ಇತ್ತು.

ಆ ಸಮಯದಲ್ಲಿ 6 ಲಕ್ಷ ಸಹ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ನಾನು ಬ್ಯಾಂಕಿನ ಹಾಳೆಯನ್ನು ಹಾಜರು ಪಡಿಸಿರುತ್ತೇನೆ. ಸಾಕ್ಷಿಗೆ ಕಡತವನ್ನು ತೋರಿಸಿ ಅದು ಯಾವ ದಾಖಲೆ ಎಂದು ಕೇಳಲಾಗಿ ಸಾಕ್ಷಿ ಅದನ್ನು ಪರಾಂಬರಿಸಿ ಕಡತದಲ್ಲಿ ಇಲ್ಲ ಎಂದು ನುಡಿಯುತ್ತಾರೆ. ಅದನ್ನು ನಾನು ಹಾಜರು ಪಡಿಸಬಲ್ಲೆ. ನನ್ನಲ್ಲಿ ನೊಂದಣಿಯ ಹಣವನ್ನು ನೀಡಲು ಸಹ ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹಣ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗಳು ನಾನು ಕೇಳಿದಂತಹ ಎಲ್ಲಾ ದಾಖಲಾತಿಗಳನ್ನು ಈ ವರೆಗೂ ನೀಡಿದರೂ ಸಹ ನಾನು ನೊಂದಣಿ ಮಾಡಿಕೊಳ್ಳಲು ತಯಾರಿಲ್ಲ ಎಂದರೆ ಸಾಕ್ಷಿಯು ಎಲ್ಲಾ ದಾಖಲಾತಿಗಳನ್ನು ನೀಡಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ತಮ್ಮ ಪಾಲಿನ ಕರಾರನ್ನು ಮಾಡಲು ತಯಾರಿದ್ದರೂ ಸಹ ನನ್ನ ಪಾಲಿನ ಕರಾರನ್ನು ಮಾಡಲು ನಾನೇ ತಯಾರಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಈ ವಾದ ಪತ್ರದ ಸ್ವತ್ತನ್ನು ಈ ದಾವೆ ಮುಗಿಯುವವರೆಗೂ ಹಾಗೆಯೇ ಇಡಬೇಕು ಮತ್ತು ನಾನು ಅವರ ಸ್ವತ್ತನ್ನು ಕರಾರು ಪತ್ರದಂತೆ ತೆಗೆದುಕೊಳ್ಳದೇ ಅವರಿಗೆ ನಷ್ಟ ಉಂಟುಮಾಡಬೇಕು ಎಂಬ ದುರುದ್ದೇಶದಿಂದ ಈ ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಿದ ನಂತರ ವಾದ ಪತ್ರದ ಸ್ವತ್ತಿಗೆ ದಾವಾ ನಂಬರನ್ನು ಬರೆದು ಸ್ವತ್ತು ದಾವೆಯಲ್ಲಿದೆ ಎಂದು ಹಾಕಿದ್ದೇನೆ ಎಂದರೆ ಸರಿ.

ನಾನು ಯಾವತ್ತಿಗೂ ಸಹ ಬಾಕಿ ಪ್ರತಿಫಲದ ಹಣವನ್ನು ನೀಡಿ ಕ್ರಯ ಪತ್ರ ನೊಂದಣಿ ಮಾಡಿಸುವ ಉದ್ದೇಶ ಇರಲಿಲ್ಲ ಆದ್ದರಿಂದಲೇ ನಾನು ದಾಖಲೆ ನೀಡಿಲ್ಲವೆಂದು ಸುಳ್ಳು ತಗಾದೆಯನ್ನು ಎತ್ತಿ ಪ್ರತಿವಾದಿಯವರಿಗೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಮಾಡುವ ಉದ್ದೇಶದಿಂದಲೇ ನಾನು ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ಸ್ವತ್ತು ನೊಂದಣಿಯಾಗಬೇಕಾದರೆ ಯಾವುದೆಲ್ಲಾ ದಾಖಲಾತಿಗಳು ಬೇಕೋ ಅದೆಲ್ಲಾ ದಾಖಲಾತಿಗಳನ್ನು ಪ್ರತಿವಾದಿಗಳು ನನಗೆ ನೀಡಿದ್ದಾರೆ ಎಂದರೆ ಸರಿಯಲ್ಲ.

ನಿ.ಪಿ.1 ರಲ್ಲಿ ಖಂಡಿಕೆ 3 ಪುಟ ಸಂಖ್ಯೆ 3 ರಲ್ಲಿ ನಮೂದಿಸಿದ ಎಲ್ಲಾ ದಾಖಲಾತಿಗಳನ್ನು ಪ್ರತಿವಾದಿಗಳು ನನಗೆ ನೀಡಿದ್ದಾರೆ ಎಂದರೆ ಸರಿಯಲ್ಲ. ಈ ಎಲ್ಲಾ ದಾಖಲಾತಿಗಳು ಬ್ಯಾಂಕಿನ ಮುಖಾಂತರ ಹಾಜರು ಪಡಿಸಲ್ಪಟ್ಟಿವೆ ಎಂದರೆ ಸರಿಯಲ್ಲ. ನಾನು ಕೇಳಿದಂತ ದಾಖಲಾತಿಗಳು ಸಿಕ್ಕಿದರೂ ಸಹ ನನಗೆ ಸ್ವತ್ತನ್ನು ಖರೀದಿಸುವ ಇಚ್ಛೆ ಇಲ್ಲದಿದ್ದರೂ ದಾಖಲಾತಿಗಳು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದಲೇ ಪ್ರತಿವಾದಿಗಳು ನನಗೆ ಯಾವುದೇ ಮುಂಗಡ ಹಣವನ್ನು ದುಪ್ಪಟ್ಟಿನೊಂದಿಗೆ ಬಡ್ಡಿಯನ್ನು ಸೇರಿಸಿ ಕೊಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ. ಕರಾರಿನಂತೆ ನಾನು ನಡೆದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ :** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**